ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 27.07.2026

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ. ಬಿ.ಕೆ. ವಕೀಲರಿಂದ

1. ದಿನಾಂಕ 05.12.2015 ರಂದು ದಾವಾ ಆಸ್ತಿಯನ್ನು ದೇವರಾಜು ಎಂಬುವವರಿಗೆ 6,20,000/- ರೂಪಾಯಿಗಳಿಗೆ ಪ್ರತಿವಾದಿಗಳು ಮತ್ತು ಅವರ ಹೆಣ್ಣು ಮಕ್ಕಳು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟ ಪತ್ರವನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿ. ಅದಕ್ಕೆ ನನ್ನ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ನನ್ನ ಮುಂದೆಯೆ ಹಣ ಪಾವತಿಯಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಕ್ಷಿದಾರರ ಮುಂದೆ ಆಗುತ್ತದೆ ಎಂದು ನುಡಿಯುತ್ತಾರೆ. ನೋಂದಣಾಧಿಕಾರಿಗಳ ಮುಂದೆ ದಿನಾಂಕ 05.12.2015 ರ ಕ್ರಯದ ಕರಾರು ಪತ್ರದ ಸಮಯದಲ್ಲಿ ಉಭಯ ಪಕ್ಷಗಾರರನ್ನು ಹಾಜರು ಮಾಡಿದ್ದೆ ಎಂದರೆ ಸರಿ.

2. ಕ್ರಯದ ಕರಾರು ಪತ್ರವನ್ನು ಬರೆದುಕೊಡುವ ಸಮಯದಲ್ಲಿ ಪತ್ರದ ಸಂಗತಿಗಳನ್ನು ಇಬ್ಬರಿಗೂ ತಿಳಿಸುತ್ತೇನೆ ಎಂದರೆ ಸರಿ. ನಾನು 2015 ರ ಕ್ರಯದ ಕರಾರು ಪತ್ರದಲ್ಲಿ ಸಹಿ ಹಾಕಿರುವ ಹೆಣ್ಣು ಮಕ್ಕಳ ಬಗ್ಗೆ ನಿ ಪಿ 1 ನ್ನು ಬರೆದುಕೊಡುವ ಸಮಯದಲ್ಲಿ ವಿಚಾರಿಸಿದಾಗ ಕ್ರಯ ಪತ್ರ ಬರೆದುಕೊಡುವ ಸಮಯದಲ್ಲಿ ಕರೆಸುತ್ತೇವೆ ಎಂದು ಪ್ರತಿವಾದಿಗಳು ತಿಳಿಸಿದ್ದರು. ಸದರಿ ಸಂಗತಿಯನ್ನು ಕ್ರಯದ ಕರಾರು ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಪತ್ರ ಬರವಣಿಗೆ ಸಮಯದಲ್ಲಿ ಎರಡು ಲಕ್ಷಕ್ಕಿಂತ ಜಾಸ್ತಿ ಹಣ ಪಾವತಿಯಾದರೆ ಅದನ್ನು ಬ್ಯಾಂಕ್ ಖಾತೆಯ ಮೂಲಕ ವರ್ಗಾವಣೆ ಮಾಡುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಗಳಿಗೆ ಯಾವುದೇ ಕರಾರಿನ ಮೊತ್ತ

ಪಾವತಿಯಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ 2015 ರಲ್ಲಿ ಬರೆದುಕೊಟ್ಟ ಕ್ರಯದ ಕರಾರಿನ ಬಾಬ್ತು ಎರಡು ಲಕ್ಷ ರೂಪಾಯಿಯನ್ನು ಬಿಟ್ಟು ಮುಂದೆ ಯಾವುದೇ ರೀತಿಯ ಹಣ ಸಂದಾಯ ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಾದ ದೇವರಾಜು ಎಂಬುವವರು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ಪತ್ರಗಳನ್ನು ಅವರು ನನ್ನ ಬಳಿಯೆ ಮಾಡಿಸುತ್ತಾರೆ ಎಂದರೆ ಸರಿಯಲ್ಲ. ಅವರ ಹೆಸರಿಗೆ ಎಷ್ಟು ಪತ್ರ ಮಾಡಿರುತ್ತೇನೆ ಎಂದು ನೆನಪಿಲ್ಲ. ಪ್ರತಿವಾದಿಗಳಿಗೆ ಮೋಸ ಮಾಡಲು ನಾನು, ವಾದಿ ಮತ್ತು ಸಾಕ್ಷಿದಾರರಾದ ದೇವರಾಜು ಪರಸ್ಪರ ಶ್ಯಾಮಿಲಾಗಿ ಪತ್ರವನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಮಗನ ಸಹಿಯನ್ನು ಸಹ ಸಾಕ್ಷಿದಾರರಾಗಿ ಪಡೆದುಕೊಳ್ಳಲಾಗಿದೆ ಎಂದರೆ ಸರಿ. ದೇವರಾಜು ಎಂಬುವವರು ಸಹ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಹಿಂದಿನ ಕರಾರಿನ ಬಗ್ಗೆ ಪ್ರತಿವಾದಿಗಳಿಗೆ ಮತ್ತು ವಾದಿಗೆ ತಿಳಿಸಿರುತ್ತೇನೆ ಆಗ ಪ್ರತಿವಾದಿಗಳು ಹಿಂದಿನ ಕರಾರು ರದ್ದಾಗಿದ್ದು ಅದನ್ನು ವಾಪಸ್ಸು ಪಡೆದುಕೊಂಡಿರುತ್ತೇವೆ ಎಂದು ತಿಳಿಸಿ ವಾದಿಗೆ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಸದರಿ ಹಿಂದಿನ ಕರಾರು ಪತ್ರದ ಹಣದ ಭದ್ರತೆಗಾಗಿ ಪ್ರಸ್ತುತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಸಮಕ್ಷಮ ಸಾಕ್ಷಿದಾರರಾದ ದೇವರಾಜುರವರಿಗೆ ಮಾಡಿದ್ದ ಕ್ರಯದ ಕರಾರು ಪತ್ರವನ್ನು ವಾಪಸ್ಸು ಪಡೆದುಕೊಂಡಿರುವುದಿಲ್ಲ. ಪ್ರಸ್ತುತ ಕ್ರಯದ ಕರಾರು ಪತ್ರದ ರೀತ್ಯಾ ಪ್ರತಿವಾದಿಗಳಿಗೆ ಯಾವುದೇ ಹಣ ಸಂದಾಯ ಆಗಿಲ್ಲ ಎಂದರೆ ಸರಿಯಲ್ಲ. ದಿನಾಂಕ 05.12.2015 ರ ಕ್ರಯದ ಕರಾರು ಪತ್ರದಲ್ಲಿ ಪಾವತಿಯಾಗಿದ್ದ ಹಣವನ್ನು

ಹೊರತುಪಡಿಸಿ ಪ್ರತಿವಾದಿಗಳಿಗೆ ನಿಪಿ 1 ರ ಕ್ರಯ ಪತ್ರದ ಮೇಲೆ ಯಾವುದೇ ಹಣ ಸಂದಾಯ ಆಗಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
C/C 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.